ಕೈಲಿ ಹೇಗೆ ಸುತ್ತಿಗೆಯಿಂದ ಹೊಡೆಸುವುದು ಎಂದೆಲ್ಲಾ ಒಬ್ಬರಿಗೆ ತೋರಿಸಿಕೊಡುತ್ತಿದ್ದ. ಮಾತಾಡುವಾಗ ಜಲೀಲ್ ಸಾಬನ ಗಡ್ಡ ಹೆಮ್ಮೆಯಿಂದ ಕುಣಿಯುತ್ತಿತ್ತು. ಆತನಿಂದ ಕಲಿಕೆಯನ್ನು ಪಡೆಯುತ್ತಿದ್ದವನು ಒಬ್ಬ ಸಹಾಯಕ ನಿರ್ದೇಶಕ ಎಂದು ಆಮೇಲೆ ಗೊತ್ತಾಯಿತು. ಒಂದಷ್ಟು ಜನ ಪೊಲೀಸರು ಶೂಟಿಂಗ್ ಹತ್ತಿರ ಹೋಗಲು ನೋಡುತ್ತಿದ್ದ ಜನರನ್ನು ನಿಯಂತ್ರಿಸಲು ಒದ್ದಾಡುತ್ತಿದ್ದರು. ನೂಕು ನುಗ್ಗಲು ಮಾಡುತ್ತಿದ್ದ ಜನರಲ್ಲಿ ಈ ನಮ್ಮ ಶಿವೂ ಕೂಡ ಇದ್ದ. ಸೂಪರ್ ಸ್ಟಾರ್ ಮದನ್‌ರಾಜ್‌ಅವರು ಬರುತ್ತಿದ್ದಾರೆ, ಶೂಟಿಂಗ್ ನಡೆಯುತ್ತಂತೆ ಅಂತನ್ನೊ ಸುದ್ದಿ ಕೇಳಿ ಉದ್ರೇಕಿತನಾಗಿದ್ದ ಪಿವನ್ ಕೆಂಚಪ್ಪ ಮೈಮರೆತು ಸಮಯಕ್ಕೆ ಮುಂಚೆ ಸ್ಕೂಲ್ ಬೆಲ್ ಬಾರಿಸಿಯೇ ಬಿಟ್ಟಿದ್ದ. ಅದನ್ನು ಕೇಳಿ, ಮೇಸ್ತ್ರ ಮಾತನ್ನೂ ಮೀರಿ ಮಕ್ಕಳು ಹೋ... ಎಂದು ಕೂಗುತ್ತಾ ತರಗತಿಯಿಂದ ಓಡಿಯೇ ಬಿಟ್ಟಿದ್ದರು. ತರಗತಿಗಳಿಂದ ಹೊರಬಂದ ಮೇಸ್ತ್ರುಗಳು ಹೆಡ್‌ಮಾಸ್ಟರರ ಮುಖ ನೋಡಿದರು. ಹೆಡ್ ಮಾಸ್ಟರರು ಪಿವನ್ ಕೆಂಚಪ್ಪನಿಗೆ ಶಾಲೆಯ ಬಳಿ ಇರಲು ಕಟ್ಟಾಜ್ಞೆ ಮಾಡಿ, ಇತರ ಮೇಸ್ತ್ರುಗಳ ಜೊತೆ ಹೊರಟರು, ಜಲೀಲ್ ಸಾಬನ ಕುಲುಮೆ ಇರುವ ಜಾಗಕ್ಕೆ.

ನೋಡನೋಡುವುದರೊಳಗೆ ಹತ್ತಾರು ಬಗೆಯ ವಾಹನಗಳು, ಬಸಾಪುರದ ರಸ್ತೆಗಳ ಮೇಲಿನ ದೂಳನ್ನು ಗಗನಕ್ಕೆ ಉಗ್ಗುತ್ತಾ ಬಂದು ಕುಲುಮೆಯಿಂದ ಸ್ವಲ್ಪ ದೂರದಲ್ಲಿ ನಿಂತವು. ಒಂದು ದೊಡ್ಡ ಕಾರಿನಿಂದ ಇಳಿದ ಮದನ್‌ರಾಜ್ ಅವರನ್ನು ಕಂಡ ಜನ ಹುಚ್ಚೆದ್ದು ಕೂಗಿದರು, ಪಡ್ಡೆ ಹುಡುಗರಂತೂ ಕುಣಿದಾಡಿದರು. ಅದಷ್ಟು ಮುಂದಿನ ಸಾಲಿನಲ್ಲಿ ಜಾಗ ಮಾಡಿಕೊಳ್ಳಲು ಒದ್ದಾಡುತ್ತಿದ್ದ ಶಿವುಗೆ ಅವರ ಕಾಲ್ತುಳಿತದಿಂದ ಉಳಿಯುವುದೇ ಕಷ್ಟವಾಯಿತು.

ನಿರ್ದೇಶಕ ರವಿರಾಜ್ ಎಲ್ಲವನ್ನು ಒಮ್ಮೆ ಪರಿಶೀಲಿಸಿದರು. ಕ್ಯಾಮರಾದವರು, ಲೈಟಿನವರು, ಮೇಕಪ್ಪಿನವರು, ಪ್ರಾಪರ್ಟಿಯವರು, ಸಹಾಯಕ, ಸಹ ನಿರ್ದೇಶಕರು ಲೋಕವನ್ನೆಲ್ಲಾ ಮರೆತು ತಮ್ಮ ತಮ್ಮ ಕೆಲಸದಲ್ಲಿ ಮುಳುಗಿದ್ದರು. ಸ್ವಲ್ಪ ಹೊತ್ತಿನಲ್ಲಿ ಮೇಕಪ್ ಮತ್ತು ಕಾಸ್ಟ್ಯೂಮಿನಲ್ಲಿ ಮದನ್‌ರಾಜ್ ತಮ್ಮ ವ್ಯಾನಿನಿಂದ ಹೊರಬಂದಾಗ ಥೇಟ್ ಕುಲುಮೆಯ ಕಮ್ಮಾರನ ಹಾಗೆಯೇ ಕಾಣುತ್ತಿದ್ದರು. ರಿಯಲಿಸ್ಟಿಕ್ ಚಿತ್ರಗಳಿಗೆ ಹೆಸರುವಾಸಿಯಾಗಿದ್ದ ನಿರ್ದೇಶಕ ರವಿರಾಜ್, ಅವರನ್ನು ಒಮ್ಮೆ ಮೇಲಿಂದ ಕೆಳಗೆ ನೋಡಿ, ಒಬ್ಬ ಸೂಪರ್ ಸ್ಟಾರನ್ನು ಅಷ್ಟೊಂದು ಡಿಗ್ಲಾಮರೈಸ್ ಮಾಡಿದ ತಮ್ಮ ಸಾಧನೆಗೆ ತಾವೇ ಹೆಮ್ಮೆಯಿಂದ ಬೀಗಿದರು. ಮದನ್‌ರಾಜ್‌ರಿಗೆ ತಮ್ಮ ಈ ರೂಪ ಅಷ್ಟೊಂದು ಹಿಡಿಸಲಿಲ್ಲ. ಆದರೆ, ಈ ಕುಲುಮೆ ಸಾಬಿಯ ಪಾತ್ರ ಮಾಡಿದರೆ ಅವಾರ್ಡ್ ಗ್ಯಾರಂಟಿ ಅಂತ ನಿರ್ದೇಶಕ ಹೇಳಿದ್ದ ಮಾತು ಅವರನ್ನು ಕಟ್ಟಿಹಾಕಿತ್ತು.

ಒಬ್ಬ ಸಹಾಯಕ ನಿರ್ದೇಶಕ ಬಾಲ ನಟ ನಿತಿನ್‌ನನ್ನು ಕರೆದುತಂದು ನಿರ್ದೇಶಕ ರವಿರಾಜ್ ಎದುರಿಗೆ ನಿಲ್ಲಿಸಿದ. ಬಡ ಹುಡುಗನ ಮೇಕಪ್ ಪರವಾಗಿಲ್ಲ, ಆದರೆ ಹಾಕಿರುವ ಬಟ್ಟೆ ಇನ್ನಷ್ಟು ಬಡವಾಗಿ ಕಾಣಬೇಕು ಎಂದು ಹೇಳಿ ನಿರ್ದೇಶಕರು ಕುಲುಮೆ ಸಾಬಿಯ ಪಾತ್ರ ಮಾಡುವ ಮದನ್‌ರಾಜ್ ಅವರತ್ತ ತೋರಿಸಿ, ಅವರ ಜೊತೆ ಮ್ಯಾಚ್ ಆಗಬೇಕು ಎಂದು ಬಯ್ದರು.

ಸಹಾಯಕ ನಿರ್ದೇಶಕ ಚಂದ್ರು ಬಾಲನಟನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ, ಅವನ ಶರ್ಟನ್ನು ತೆಗೆಸಿದ, ಅದು ಅಥೆಂಟಿಕ್ ಆಗಿ ಬಡ ಹುಡುಗ ಹಾಕುವ ಅಂಗಿಯ ಹಾಗೆ ಟ್ರೀಟ್‌ಮೆಂಟ್ ಮಾಡುವ ಉದ್ದೇಶದಿಂದ ಅದನ್ನು ಮುದುಡಿ ಕುಲುಮೆ ಪಕ್ಕದ ಬೆಂಚಿನ ಮೇಲೆ ಉಜ್ಜಿದ. ಸಾಲಲಿಲ್ಲ. ಅಂಗಿಯನ್ನು ಹೆಗಲ ಮೇಲೆ ಸ್ವಲ್ಪ, ಎದೆಯ ಮೇಲೆ ಸ್ವಲ್ಪ ಬಲವಂತವಾಗಿ ಹರಿದ. ಆದರೂ ಅದು ನೈಜವಾಗಿ ಕಾಣುತ್ತಿರಲಿಲ್ಲ. ಚಂದ್ರ ಹತಾಶೆಯಿಂದ ಒಮ್ಮೆ ಸುತ್ತಲೂ ನಿಂತಿರುವ ಜನರತ್ತ ನೋಡಿದ ಸುಮ್ಮನೇ. ಆದರೆ, ಗುಂಪಿನ ಎದುರು ನಿಲ್ಲಲು ಜಾಗಕ್ಕಾಗಿ ಹೋರಾಡುತ್ತಿದ್ದ ಶಿವು ಅವನಿಗೆ ಕಂಡಾಗ ಶಿವನೇ ಬಂದು ಕಾಪಾಡಿದಷ್ಟು ಸಂತೋಷ ಅವನಿಗಾಯಿತು. ಶಿವು ಸರಿಯಾಗಿ ನಿತಿನ್ ವಯಸ್ಸಿನ ಹುಡುಗನೇ ಆಗಿದ್ದ. ಅವನು ತೊಟ್ಟಿದ್ದ ಬಟ್ಟೆ ಅಥೆಂಟಿಕ್ ಆಗಿ ಬಡಬಾಲಕನ ಬಟ್ಟೆಯಾಗಿತ್ತು!

ಚಂದ್ರುಗೆ ಏನೋ ಹೊಳೆಯಿತು. ಆತ ಶಿವುಗೆ ಸನ್ನೆ ಮಾಡಿ ಹತ್ತಿರ ಬರಲು ಹೇಳಿದ. ಇದ್ದನ್ನು ನೋಡಿ ಶಿವುಗೆ ಮೈಯೆಲ್ಲಾ ರೋಮಾಂಚನವಾಯಿತು. ಕರೆಯುತ್ತಿರುವುದು ತನ್ನನ್ನೇ ಎಂದು ಖಾತರಿ ಮಾಡಿಕೊಂಡು ಚಂದ್ರು ಎದುರು ನಿಂತುಕೊಂಡು ಸಿಂಬಳ ಒರೆಸಿಕೊಂಡ. ಅವನನ್ನು ಮೇಲಿಂದ ಕೆಳಗೆ